ದಿ: 11-02-2026ರಂದು ಖನೇ ಪ್ರತಿವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಮುಂದುವರೆದ ಪಾಟೀ ಸವಾಲು**</u>: ವಾದಿ ಪರ ಶ್ರೀಯುತ ಕೆ.ವಿ.ಕೆ. ವಕೀಲರಿಂದ.

5. ನಾನು ಬಿಎಸ್ಸಿ ಮತ್ತು ಎಲ್.ಎಲ್.ಬಿ ಪದವಿಧರನಾಗಿರುತ್ತೇನೆ. ದಿ: 05.06.1995 ರಂದು ಮುತ್ಯಾಲಮ್ಮ ಕೋಂ ಮುತ್ಯಾಲಪ್ಪ ಬಿನ್ ದೇಕಪ್ಪರವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿ: 11.02.2012 ರಂದು ೧ನೇ ಪ್ರತಿವಾದಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ದಿ: 23.06.2017 ರಂದು ೨ನೇ ಪ್ರತಿವಾದಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.34 ಕ್ರಯ ಪತ್ರದಂತೆ ನನಗೆ ಮಾರಾಟ ಮಾಡಿದ್ದಾರೆ ಎಂದು ಹೇಳುವ ಮುತ್ಯಾಲಮ್ಮರವರು ತಮ್ಮ ಜಿ.ಪಿ.ಎ ದಾರರ ಮೂಲಕ ಬಾಸ್ಕರ್ ರೆಡ್ಡಿರವರಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.2 ರಂತೆ ಶ್ರೀರಾಮ್ ರವರ ಹೆಸರಿಗೆ ಪೌತಿ ಖಾತೆ ಮಾಡಲು ಆದೇಶವಾಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಏಕಪಕ್ಷೀಯವಾಗಿ ಆದೇಶ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಡಿ.34 ಕ್ರಯ ಪತ್ರದ ವಿರುದ್ದ ವಾದಿಗಳು ನಿ.ಡಿ.38 ರಂತೆ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಅದು ಬೇರೆ ದಾವೆ ಎಂದು ನುಡಿಯುತ್ತಾರೆ.

6. ನಿ.ಡಿ.38 ದಾವೆಯ ಖನೇ ಪ್ರತಿವಾದಿ ನನ್ನ ದೂರದ ಸಂಬಂಧಿ ಇರುತ್ತಾರೆ. ನಿ.ಡಿ.38 ದಾವೆ ಚಾಲ್ತಿಯಲ್ಲಿರುವಾಗ ನನ್ನ ದೂರದ ಸಂಬಂಧಿಯಾದ ನಿ.ಡಿ.38 ದಾವೆಯ ಖನೇ ಪ್ರತಿವಾದಿ ವಿಕ್ಕಿ ಥಾಮಸ್ ಮತ್ತು ರಿಕ್ಕಿ ಥಾಮಸ್ ರವರಿಗೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಕ್ಕಿ ಥಾಮಸ್ ಮತ್ತು ರಿಕ್ಕಿ ಥಾಮಸ್ ರವರು ವಾದಿಗಳಿಂದ ಒಪ್ಪಿಗೆ ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿ: 05.06.1995 ರಲ್ಲಿ ದಾವಾ ಆಸ್ತಿ ಮಂಜೂರು ಮಾಡಲಾಗಿದ್ದ ಮುತ್ಯಾಲಮ್ಮರವರು ಮೃತಪಟ್ಟಿದ್ದು ಮತ್ತು ನಾನು ದಾವಾ ಆಸ್ತಿಯ ಬಾಜುದಾರನಾದ ಮೇರೆಗೆ ಸದರಿ ಮುತ್ಯಾಲಮ್ಮರವರ ಹೆಸರಿನಲ್ಲಿ ಮತ್ತೊಬ್ಬ ಮಹಿಳೆಯನ್ನು ಸೃಷ್ಟಿಸಿ ಕ್ರಯ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಿದ್ಯಾವಂತರಾಗಿದ್ದರು ದಾವಾ ಆಸ್ತಿಯನ್ನು ಕಬಳಿಸುವ ಸಲುವಾಗಿ ಮುತ್ಯಾಲಮ್ಮರವರನ್ನು ಸೃಷ್ಟಿಸಿ ನಿಪಿ.10 ದಾಖಲೆಯನ್ನು ಮಾಡಿದ್ದರು ತಪ್ಪಾಗಿ ನಮೂದು ಮಾಡಲಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆ ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.